


1992ರ ಒಲಿಂಪಿಕ್ಸ್: ಜರ್ಮನಿ ವಿರುದ್ಧದ ಹಾಕಿ ಪಂದ್ಯದಲ್ಲಿ ಭಾರತದ ಆಟಗಾರ ಧನರಾಜ್ ಪಿಳ್ಳೈ



2016ರ ಬ್ರೆಜಿಲ್ ಒಲಿಂಪಿಕ್ಸ್‌ನಲ್ಲಿ ದೀಪಾ ಕರ್ಮಾಕರ್ ಜಿಮ್ನಾಸ್ಟಿಕ್ ಪ್ರದರ್ಶನ

ಇವರ ಸಂಖ್ಯೆ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗುವ ಸಾಧ್ಯತೆಯಿದೆ. ಆರ್ಚರಿ, ಅಥ್ಲೆಟಿಕ್ಸ್, ಈಕ್ವೆಸ್ಟ್ರಿಯನ್, ಬ್ಯಾಡ್ಮಿಂಟನ್, ಬಾಕ್ಸಿಂಗ್, ಹಾಕಿ, ಗಾಲ್ಫ್, ಜೂಡೊ, ರೋವಿಂಗ್, ಸೇಲಿಂಗ್, ಶೂಟಿಂಗ್, ಈಜು, ಟೇಬಲ್ ಟೆನಿಸ್, ಟೆನಿಸ್, ವೇಟ್‌ಲಿಫ್ಟಿಂಗ್ ಮತ್ತು ಕುಸ್ತಿ ಸ್ಪರ್ಧೆಗಳಲ್ಲಿ ಸಾಮರ್ಥ್ಯ ಪಣಕ್ಕೊಡ್ಡಲಿದ್ದಾರೆ.

## ಹಾಕಿಯಲ್ಲಿ ನಿರೀಕ್ಷೆ

ರಾಷ್ಟ್ರೀಯ ಕ್ರೀಡೆ ಹಾಕಿಯಲ್ಲಿ ಭಾರತ ಒಲಿಂಪಿಕ್ಸ್ ಇತಿಹಾಸದ ಪುರುಷರ ತಂಡ ವಿಭಾಗದಲ್ಲಿ ಹೆಚ್ಚು ಪದಕಗಳನ್ನು ಗೆದ್ದ ದಾಖಲೆ ಹೊಂದಿದೆ. ಭಾರತ ಇದುವರೆಗೆ ಎಂಟು ಚಿನ್ನ, ಒಂದು ಬೆಳ್ಳಿ ಹಾಗೂ ಮೂರು ಕಂಚಿನ ಪದಕಗಳನ್ನು ಜಯಿಸಿ ಜಗತ್ತಿನ 'ಹಾಕಿ ನಕಾಶೆ'ಯ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಹೀಗಾಗಿ, 1980ರ ಬಳಿಕದ ಒಲಿಂಪಿಕ್ಸ್ ಕೂಟಗಳಲ್ಲಿ ಭಾರತ ಹಾಕಿಯಲ್ಲಿ ಪದಕ ಗೆಲ್ಲುವುದು ನಿಶ್ಚಿತ ಎನ್ನುವ ಆಸೆ ಸಹಜವಾಗಿದ್ದರೂ, ನೆದರ್ಲೆಂಡ್ಸ್, ಇಂಗ್ಲೆಂಡ್, ಬೆಲ್ಜಿಯಂ, ಆಸ್ಟ್ರೇಲಿಯಾ, ಜರ್ಮನಿ ದೇಶಗಳ ಪ್ರಬಲ ಸವಾಲು ಮೀರುವುದು ಸುಲಭವೇನಲ್ಲ. ಕಾಲಾನಂತರದಲ್ಲಿ ಆದ ಇಳಿತ ಮತ್ತು 2008ರ ಬೀಜಿಂಗ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಾಗದ ವೈಫಲ್ಯ ಈಗಲೂ ಕಹಿ ನೆನಪಾಗಿಯೇ ಉಳಿದಿದೆ.



2012ರ ಲಂಡನ್ ಒಲಿಂಪಿಕ್ಸ್‌ನ ಬಾಕ್ಸಿಂಗ್‌ನಲ್ಲಿ ಪದಕ ಪಡೆದ ಮೇರಿ ಕೋಮ್

ಸೋಲಿನ ನೋವಿನಿಂದ ಹೊರಬಂದು 'ಗೋಲಿನ ಟ್ರ್ಯಾಕ್' ಏರಲು ಭಾರತದ ಆಟಗಾರರು ಬಹಳಷ್ಟು ಬೆವರು ಸುರಿಸಬೇಕಾಯಿತು. ಇದರ ಫಲವಾಗಿ ಹಿಂದಿನ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು. 41 ವರ್ಷಗಳ ಬಳಿಕ ಬಲಿಷ್ಠ ಜರ್ಮನಿ ಎದುರು ಪಡೆದಿದ್ದು ಐತಿಹಾಸಿಕ ಗೆಲುವು. ಈ ಬಾರಿಯೂ ತಂಡದ ಮೇಲೆ ಪದಕದ ನಿರೀಕ್ಷೆಯಿದೆ. ಭಾರತ ಎರಡು ವರ್ಷಗಳ ಹಿಂದೆಯೇ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಒಲಿಂಪಿಕ್ಸ್‌ನಲ್ಲಿ ಸ್ಥಾನ ಖಚಿತಪಡಿಸಿಕೊಂಡಿದೆ.

ಸೋಲಿನ ಬಳಿಕ ಗೆಲುವಿನ ಹಾದಿಯಲ್ಲಿ ಸಾಗಿದ ಬಳಿಕ ಭಾರತ ತಂಡದ ಅನುಭವವೂ ಪಕ್ವಗೊಳ್ಳುತ್ತ ಸಾಗಿದ್ದು, 2022ರ ಏಷ್ಯಾ ಕಪ್‌ನಲ್ಲಿ ಕಂಚು, ಕಳೆದ ವರ್ಷ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಚಿನ್ನ, ಎರಡು ವರ್ಷಗಳ ಹಿಂದೆ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ರನ್ನರ್ಸ್ ಅಪ್ ಸ್ಥಾನದ ಯಶಸ್ಸು ದೊರೆತಿದೆ. ಪ್ರಮುಖ ಟೂರ್ನಿಗಳಲ್ಲಿ ತಂಡ